

# ದೀಕ್ಷಿತ್ ‘ದೀ’ ಹೆಜ್ಜೆ

‘ದಿಯಾ’. ‘ಬ್ಲಿಂಕ್’ ಸಿನಿಮಾಗಳ ಮೂಲಕ ತಮ್ಮ ನಟನಾ ಕೌಶಲವನ್ನು ಸಾಬೀತುಪಡಿಸಿರುವ, ಕನ್ನಡ, ತೆಲುಗು, ತಮಿಳು, ಮಲೆಯಾಳಂ ಸಿನಿಮಾಗಳಲ್ಲಿ ಹೆಸರು ಗಳಿಸುತ್ತಿರುವ ನಟ ದೀಕ್ಷಿತ್ ಶೆಟ್ಟಿ, ಶ್ರೀನಿಧಿ ಬೆಂಗಳೂರು ಅವರೊಂದಿಗೆ ಮತ್ತೊಂದು ಪ್ರಾಜೆಕ್ಟ್‌ನಲ್ಲಿ ಒಂದಾಗುತ್ತಿದ್ದಾರೆ.

ಈ ಬಾರಿ ನಟನಾಗಿ ಮಾತ್ರವಲ್ಲ, ನಿರ್ಮಾಪಕರಾಗಿಯೂ ಹೊಸ ಪಾತ್ರ ವಹಿಸುತ್ತಿದ್ದಾರೆ. ಸದ್ಯ ನಟನೆಯಿಂದ ನಿರ್ಮಾಣದೆಡೆಗೂ ತಮ್ಮ ಹಾದಿ ವಿಸ್ತರಿಸಿಕೊಂಡಿರುವ ದೀಕ್ಷಿತ್ ಶೆಟ್ಟಿ, ‘ದೀ ಸಿನಿಮಾಸ್’ ಸಿನಿಮಾ ನಿರ್ಮಾಣ ಸಂಸ್ಥೆ ಕಟ್ಟಿದ್ದಾರೆ. ಈ ಸಂಸ್ಥೆಯಡಿಯಲ್ಲಿ ಸಿನಿಮಾ ರೂಪಿಸುತ್ತಿದ್ದಾರೆ.

ಶ್ರೀನಿಧಿ ಬೆಂಗಳೂರು ಜೊತೆಗಿನ ಈ ಸಿನಿಮಾಗೆ ‘ವಿಡಿಯೊ’ ಎಂದು ಹೆಸರಿಡಲಾಗಿದೆ. ಈ ಸಿನಿಮಾ ಮೂಲಕ ಅಧಿಕೃತವಾಗಿ ತಮ್ಮ ಪ್ರೊಡಕ್ಷನ್ ಬ್ಯಾನರ್ ಬಿಡುಗಡೆ ಮಾಡಿದ್ದು, ತಮ್ಮ ಹತ್ತು ವರ್ಷದ ಸಿನಿಮಾ ಪಯಣದಲ್ಲಿ ಹೊಸ ಮೈಲುಗಲ್ಲನ್ನು ರೂಪಿಸುವ ಪ್ರಯತ್ನದಲ್ಲಿದ್ದಾರೆ.

‘ಹೊಸ ಹೊಸ ಆಲೋಚನೆಗಳು ಹಾಗೂ ಪ್ರತಿಭಾನ್ವಿತರಿಗೆ ಜಾಗ ಸೃಷ್ಟಿಸಬೇಕು. ಹೊಸ ಕಥೆಗಳಿಗೆ ವೇದಿಕೆ ಕಲ್ಪಿಸಬೇಕು ಎಂಬ ಮನಸ್ಸಿತ್ತು. ಅದಕ್ಕೆ ನಿರ್ಮಾಣ ಸಂಸ್ಥೆ ಒಂದು ಹೆಜ್ಜೆಯಾಗಿದೆ. ಮಹತ್ವಾಕಾಂಕ್ಷೆಯ ಹೊಸ ಹೆಜ್ಜೆ ಇದಾಗಿದ್ದು, ಹೊಸತನದ ಕನ್ನಡ ಸಿನಿಮಾಗಳನ್ನು ಹೊರತರುವ ಆಲೋಚನೆಯಿದೆ’ ಎಂದು ‘ದೀ ಸಿನಿಮಾಸ್’ ಹುಟ್ಟಿನ ಕಾರಣವನ್ನು ಹೇಳಿಕೊಂಡರು.

‘ವಿಡಿಯೊ’, ಹಾರರ್ ಸಿನಿಮಾ ಆಗಿದ್ದು, ಡಿಜಿಟಲ್ ಸಂಸ್ಕೃತಿಯಲ್ಲಿ ಒಂದು ಹಾರರ್ ಸಿನಿಮಾವನ್ನು ಅತಿ ಸಮರ್ಥವಾಗಿ ಕಾಣಿಸಲು ಆಧುನಿಕ ಸಾಧನಗಳನ್ನು ಬಹಳ ಸಮರ್ಥವಾಗಿ ಬಳಸಿಕೊಳ್ಳಲಾಗಿದೆ’ ಎಂದಿದ್ದಾರೆ ಶ್ರೀನಿಧಿ ಬೆಂಗಳೂರು.

ಸದ್ಯ ಶೇ. 80ರಷ್ಟು ಚಿತ್ರೀಕರಣ ಮುಗಿದಿದ್ದು, ಸಿನಿಮಶ ಪೋಸ್ಟ್ ಪ್ರೊಡಕ್ಷನ್ ಹಂತದಲ್ಲಿದೆ. ‘ಬ್ಲಿಂಕ್’ ಸಿನಿಮಾದ ತಂತ್ರಜ್ಞರು ಈ ಸಿನಿಮಾಗೂ ಕೈ ಜೋಡಿಸಿದ್ದಾರೆ. ■

# ಚಂದನವನಕ್ಕೆ ಪ್ರಿಯಾಂಕಾ ರೇವ್ರಿ



**ತೆಲುಗು** ಸಿನಿಮಾಗಳಲ್ಲಿ ಮಿಂಚಿದ್ದ ನಟಿ ಪ್ರಿಯಾಂಕಾ ರೇವ್ರಿ ಇದೀಗ ಕನ್ನಡ ಸಿನಿಮಾರಂಗಕ್ಕೆ ಎಂಟ್ರಿ ಕೊಟ್ಟಿದ್ದಾರೆ. ಕನ್ನಡದ ‘ಯಾರಿಗೆ ಬೇಕು ಈ ಲೋಕ’ ಸಿನಿಮಾದಲ್ಲಿ ನಟಿಸುತ್ತಿದ್ದು, ತಮ್ಮ ವೃತ್ತಿ ಜೀವನದಲ್ಲಿ ಇದೊಂದು ಮಹತ್ತರ ಬದಲಾವಣೆ ಎಂದೂ ಹೇಳಿಕೊಂಡಿದ್ದಾರೆ.

‘ಪ್ರೇಮ ದೇಶಪು ಯುವರಾಣಿ’, ‘ಲೀಗಲಿ ವೀರ್’ ಇತ್ಯಾದಿ ತೆಲುಗು ಸಿನಿಮಾಗಳಲ್ಲಿ ನಟಿಸಿರುವ ನಟಿ ಪ್ರಿಯಾಂಕಾ ರೇವ್ರಿ ಈಚೆಗೆ ಮ್ಯೂಸಿಕ್ ವಿಡಿಯೊವೊಂದರಲ್ಲಿ ನಟಿಸಿ ಮೆಚ್ಚುಗೆ ಗಳಿಸಿಕೊಂಡಿದ್ದರು. ಈ ಸಮಯದಲ್ಲಿಯೇ ಚಂದನವನದಲ್ಲಿ ಅವರಿಗೆ ಅವಕಾಶ ಕೂಡಿಬಂದಿದೆ. ನಟ ಆರ್ಯವರ್ಧನ್‌ಗೆ ಜೋಡಿಯಾಗಿ ಪ್ರಿಯಾಂಕಾ ನಟಿಸುತ್ತಿದ್ದಾರೆ.

‘ನನ್ನ ಕರಿಯರ್‌ನಲ್ಲಿ ಕನ್ನಡ ಸಿನಿಮಾದಲ್ಲಿ ನಟಿಸುತ್ತಿರುವುದು ಬಹುದೊಡ್ಡ ಸಂಗತಿ. ನನ್ನ ವೃತ್ತಿಬದುಕಿನ ಹೊಸ ಅಧ್ಯಾಯ ಕೂಡ. ಕನ್ನಡ ಶ್ರೀಮಂತ ಭಾಷೆ. ಇಲ್ಲಿ ನನಗೆ ಎಲ್ಲವೂ ಹೊಸತು. ಭಾಷೆ, ಸಂಸ್ಕೃತಿ, ಭಾವನೆ ಎಲ್ಲವೂ. ಇವೆಲ್ಲವೂ ತಾಜಾ ಗಾಳಿಯಂತೆ ಅನುಭವವಾಗುತ್ತಿವೆ’ ಎಂದು ಉತ್ಸಾಹ ತುಂಬಿ ಮಾತನಾಡಿದ್ದಾರೆ.

‘ಕನ್ನಡದಲ್ಲಿ ಸಿನಿಮಾ ಅವಕಾಶ ಗಿಟ್ಟಿಸಿಕೊಳ್ಳಲೇಬೇಕು ಎಂದು ಆಡಿಷನ್‌ಗೆ ಸಿದ್ಧವಾಗಿದ್ದೆ. ಸಿನಿಮಾಗೆ ನಾನು ಆಯ್ಕೆಯಾದೆ ಎಂಬುದನ್ನು ಖಚಿತಪಡಿಸಿದಾಗ ಬಹಳ ಖುಷಿಯಾಯಿತು’ ಎಂದು ಹೇಳಿದ್ದಾರೆ.

ಸಿನಿಮಾ ಬಗ್ಗೆ ಮಾತನಾಡಿರುವ ಅವರು, ‘ಸಸ್ಪೆನ್ಸ್, ಡ್ರಾಮಾ ಹಾಗೂ ರೊಮ್ಯಾನ್ಸ್ ಈ ಮೂರರ ಮಿಶ್ರಣ ಈ ಸಿನಿಮಾ. ಪ್ರೇಕ್ಷಕರನ್ನು ಹಿಡಿದಿಟ್ಟುಕೊಂಡು ಕಥೆ ಸಾಗುತ್ತಾ ಹೋಗುತ್ತದೆ. ಮುಂದೆ ಏನಾಗುತ್ತದೆ ಎಂಬ ಕಾತರದಿಂದ ಕಾಯುವಂತೆ ಮಾಡುತ್ತದೆ. ಭಾವನೆಗಳ ಜೊತೆ ಅಚ್ಚರಿಗಳನ್ನೂ ಒಳಗೊಂಡಿರುವ ಸಿನಿಮಾ. ನನ್ನದು ಕಥೆಯನ್ನು ಬ್ಯಾಲೆನ್ಸ್ ಮಾಡುವಂಥ ಪಾತ್ರ’ ಎಂದು ಖುಷಿ ಹಂಚಿಕೊಂಡಿದ್ದಾರೆ. ■